SRI B. SUBBAYYA SHETTY.—If this was the case only in Belgaum area, the hon. member could have accused. But it is there in other areas also It is on account of dearth of teachers. The K. P. S C. took sufficient time to recruit teachers, and even after sending the list by the KPSC., we find that it was not mediumwise, and that is why the difficulty arose.

SRI B. B. SAYANAK.—When there is unemployment problem, why the Government is not going to fill up the vacancies? When such is the case, I have to say that it is a step-motherly treatment to marati boys !

SRI B. SUBBAYYA SHETTY.—Sir, I do not know why the hon; member is again and again using the word 'step-motherly treatment' Perhaps he knows only that word. The Government had sent the vacancy report to the KPSC, which took some time in recruiting teachers, and that is why there was delay. The KPSC recruits for the entire State. It is a question of not only Belgaum area, but also other areas as well. So, the question of step-motherly treatment does not arise at all.

**Electrification of villages in Bijapur taluk**

158 SRI B. B. PATIL (Tikota).—Will the State Minister for Information and Youth Services be pleased to state :—

(a) the number of villages electrified in Bijapur Taluk in Bijapur District ;

(b) the number of villages yet to be electrified in Bijapur Taluk ;

(c) the number of villages that come under REC programme?

SRI K. H. SRINIVAS (Minister of State for Information and Youth Service).—

(a) 69.

(b) 39.

(c) Nil.

ಶ್ರೀ ಬಿ. ಬಿ. ಪಾಟೀಲ್.—ಉತ್ತರ 'ಎ' ನಲ್ಲಿ ವಿಜಾಪುರ ಜಿಲ್ಲೆಯ ವಿಜಾಪುರ ತಾಲ್ಲೂಕಿನ ೧೦೮ ಹಳ್ಳಿಗಳ ಪೈಕಿ ೬೯ ಹಳ್ಳಿಗಳಿಗೆ ವಿದ್ಯುತ್ತೀಕರಣ ಗೊಳಿಸಿದೆ ಎಂದು ತಿಳಿಸಿದ್ದೀರಿ. ಈ ೬೯ ಹಳ್ಳಿಗಳಲ್ಲಿ ಕೆಲವು ಹಳ್ಳಿಗಳಿಗೆ ಪಂಪುಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟಿಲ್ಲ, ಕೆಲವು ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಿದ್ದಾರೆ ಆದುದರಿಂದ ಎಷ್ಟು ಹಳ್ಳಿಗಳಿಗೆ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಿದ್ದಾರೆ, ಎಷ್ಟು ಹಳ್ಳಿಗಳಿಗೆ ಪಂಪು ಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟಿದ್ದಾರೆ ಎನ್ನುವುದನ್ನು ತಿಳಿಸುತ್ತೀರಾ ?

†ಶ್ರೀ ಕೆ. ಎಚ್. ಶ್ರೀನಿವಾಸ್.—ಆ ಬ್ರೇಕಪ್ ಇಲ್ಲಿ ಇಲ್ಲ, ಎಷ್ಟು ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಯಾಗಿದೆ ಎಂದು ಕೇಳಿದ್ದೀರಿ, ಅಷ್ಟು ಮಾತ್ರಕ್ಕೆ ಉತ್ತರಕೊಟ್ಟಿದೆ. ಎಷ್ಟು ಹಳ್ಳಿಗಳಿಗೆ ಪಂಪುಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟಿದ್ದಾರೆ ಎನ್ನುವುದಕ್ಕೆ ಬೇರೆ ನೋಟೀಸ್ ಬೇಕು

ಶ್ರೀ ಬಿ. ಬಿ. ಪಾಟೀಲ್.—ಉಳಿದ ೩೯ ಹಳ್ಳಿಗಳಿಗೆ ಪಂಪುಸೆಟ್ಟುಗಳಿಗೆ ಕನೆಕ್ಷನ್ ಬಂದಿಲ್ಲ, ರೂರಲ್ ಎಲೆಕ್ಟ್ರಿಫಿಕೇಷನ್ ಆಗಿಲ್ಲ. ಆ ಹಳ್ಳಿಯವರಿಗೆ ನಮ್ಮ ಹಳ್ಳಿಗಳಿಗೆ ವಿದ್ಯುತ್ ಒರುವುದಿಲ್ಲವೇನೋ ಎಂಬ ಸಂಶಯ ಬಂದಿದೆ, ಆದುದರಿಂದ ಈ ೩೯ ಹಳ್ಳಿಗಳ ಸಲುವಾಗಿ ತೀವ್ರವಾದ ಕಾರ್ಯಕ್ರಮ ತೆಗೆದು ಕೊಂಡು ವಿದ್ಯುತ್ ಪೂರೈಕೆ ಮಾಡಿ, ಪಂಪುಸೆಟ್ಟುಗಳಿಗೆ ಕನೆಕ್ಷನ್ ಮಾಡುವ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—೧೦೮ ಹಳ್ಳಿಗಳಲ್ಲಿ ೬೯ ಹಳ್ಳಿಗಳಿಗೆ ಈಗಾಗಲೇ ವಿದ್ಯುತ್ತೀಕರಣ ವಾಗಿದೆ, ಇನ್ನುಳಿದ ೩೯ ಹಳ್ಳಿಗಳಿಗೆ ವಿದ್ಯುತ್ತೀಕರಣವಾಗಬೇಕು. ಇದನ್ನು ಗ್ರಾಮಾಂತರ ವಿದ್ಯುತ್ತೀ ಕರಣ ಕಾರ್ಯಕ್ರಮದ ಪ್ರಕಾರ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಿ. ಪಾಟೀಲ್.— ಕೆಲವು ಹಳ್ಳಿಗಳಿಗೆ ಪಂಪುಸೆಟ್ಟು ಕೊಟ್ಟಿದ್ದಾರೆ ಅಲ್ಲಿ ವಿಲೇಜ್ ಎಲೆಕ್ಟ್ರಿಫಿ-ಕೇಷನ್ ಆಗಿಲ್ಲ, ಆದುದರಿಂದ ಎಲ್ಲಾ ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಡಲಿಕ್ಕೆ ರೂರಲ್ ಎಲೆಕ್ಟ್ರಿಫಿಕೇಷನ್ ಆಗುವ ಸಲುವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.— ಅಂಥಾದ್ದನ್ನು ನನ್ನ ಗಮನಕ್ಕೆ ತಂದರೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ. ಆದಕ್ಕೆ ಕಾರಣ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಪಂಪ್‌ಸೆಟ್ ಕೊಟ್ಟಮೇಲೆ ವಿದ್ಯುಚ್ಛಕ್ತಿ ಕೊಡುವುದಕ್ಕೆ ನ್ಯಾಯವಾದ ತೊಂದರೆ ಇರುವುದಕ್ಕೆ ಸಾಧ್ಯವಿಲ್ಲ. ಅಂಥಾ ವಿವರಗಳನ್ನು ಒದಗಿಸಿಕೊಟ್ಟರೆ ಅದನ್ನು ಪರಿಶೀಲನೆ ಮಾಡುತ್ತೇನೆ.

## Junior College at Dandinadibba,

358 SRI G. S. SHIVANANJAPPA (Bellavi).—Will the Minister for Education be pleased to state ,—

(a) whether Government is aware that the people of Dodderi Hobli, Madhugiri Taluk, Tumkur District are demanding to open a Junior College at Dandinadibba ;

(b) if so, what action the Government has taken so far for opening a Junior College ?

SRI B. SUBBAYYA SHETTY (Minister for Education).—

(a) No such information has come to the notice of Government.

(b) Does not arise.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ಉತ್ತರ ನೋಡಿದರೆ ಸತ್ಯಕ್ಕೆ ದೂರವಾದುದು ಎಂದು ಕಾಣುತ್ತದೆ. ನಾನೇ ಮಾನ್ಯ ಮಂತ್ರಿಗಳಲ್ಲಿ ಎರಡು ಸಾರಿ ಮನವಿ ಮಾಡಿಕೊಂಡಿದ್ದೇನೆ. It is under consideration of the Government ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಇಲ್ಲಿ ಉತ್ತರ ಕೊಡುವಾಗ ಅಂಥ ಯಾವುದೇ ಮಾಹಿತಿ ಸರ್ಕಾರದವರ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದುದು ತಪ್ಪು ಉತ್ತರ ಬರಬಾರದು. ನಾನು ದಂಡಿನ ದಿಬ್ಬದಲ್ಲಿ ಜೂನಿ-ಯರ್ ಕಾಲೇಜು ಆಗಬೇಕು ಎಂದು ಕೇಳಿದ್ದೇನೆ. ಈ ನನ್ನ ಡಿಮಾಂಡ್ ಏನಿದೆ ಇದನ್ನು ತಾವು ರೀಕನ್ಸಿ ಡರ್ ಮಾಡುತ್ತೀರಾ ?

†ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಬಹುಶಃ ಉತ್ತರ ಬಂದ ಮೇಲೆ ಇದು ಬಂದಿರಬೇಕು ; ನೀವು ಕಳುಹಿಸಿದ ಮೇಲೆ ಬಂದಿರಬೇಕು. ಅಲ್ಲಿ ಜೂನಿಯರ್ ಕಾಲೇಜು ಆಗಬೇಕು ಎಂಬ ತಮ್ಮ ಆಗ್ರಹ ಏನಿದೆ ಅದನ್ನು ಪರಿಶೀಲಿಸುತ್ತೇನೆ.